# ದ್ವಿತೀಯಪಿ.ಯು.ಸಿ. ವಾರ್ಷಿಕ ಪರೀಕ್ಷೆ ಎಪ್ರಿಲ್–ಮೇ–2022
# ಮಾದರಿ ಪ್ರಶ್ನೆ ಪತ್ರಿಕೆ

**ಅವಧಿ: 3 ಗಂಟೆ 15 ನಿಮಿಷ** **ಸಮಾಜಶಾಸ್ತ್ರ–28** **ಅಂಕಗಳು: 100**

---

**I. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ತಲಾ ಒಂದು ವಾಕ್ಯದಲ್ಲಿ ಉತ್ತರಿಸಿ. 10X1=10**

1. ಭಾರತದ ಪ್ರಾಚೀನ ಹೆಸರುಗಳಲ್ಲಿ ಒಂದನ್ನು ಹೆಸರಿಸಿ.
2. ಯಾವ ವರ್ಷವನ್ನು ಜನಸಂಖ್ಯಾಶಾಸ್ತ್ರೀಯ ವಿಭಜಕ ವರ್ಷ ಎಂದು ಪರಿಗಣಿಸಲಾಗಿದೆ?
3. 'ಹರಿಜನ' ಎಂಬ ಪದವನ್ನು ಜನಪ್ರಿಯಗೊಳಿಸಿದವರು ಯಾರು?
4. ಕರ್ನಾಟಕದ ಯಾವುದಾದರೊಂದು ಹಿಂದುಳಿದ ವರ್ಗಗಳ ಆಯೋಗವನ್ನು ತಿಳಿಸಿ.
5. ನಿಶ್ಚಯಾತ್ಮಕ ಕ್ರಿಯೆ ಎಂಬ ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದವರು ಯಾರು?
6. ಸ್ತ್ರೀಶಕ್ತಿ ಯೋಜನೆಯನ್ನು ಯಾವ ವರ್ಷದಲ್ಲಿ ಜಾರಿಗೊಳಿಸಲಾಯಿತು?
7. ಅವಿಭಕ್ತ ಕುಟುಂಬದ ಬದಲಾವಣೆಗೆ ಯಾವುದಾದರೂ ಒಂದು ಕಾರಣವನ್ನು ತಿಳಿಸಿ.
8. 'ತರವಾಡು' ಎಂದರೇನು?
9. IRDP-ವಿಸ್ತರಿಸಿ ಬರೆಯಿರಿ.
10. ಹಸಿರು ಕ್ರಾಂತಿಯ ಪಿತಾಮಹ ಯಾರು?
11. ಭಾರತೀಯ ಗ್ರಾಮಗಳನ್ನು 'ಪುಟ್ಟ ಗಣರಾಜ್ಯಗಳು' ಎಂದು ಕರೆದವರು ಯಾರು?
12. ಕರ್ನಾಟಕದ ಪ್ರಥಮ ವರ್ತಮಾನ ಪತ್ರಿಕೆಯಾವುದು?
13. 'ಭಾರತದಲ್ಲಿ ಸಾಮಾಜಿಕ ಚಳುವಳಿ' ಎಂಬ ಗ್ರಂಥವನ್ನು ಬರೆದವರು ಯಾರು?
14. ಪಾಶ್ಚಿಮಾತ್ಯೀಕರಣ ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು?
15. ಯಾವುದಾದರೂ ಒಂದು ಬಹುರಾಷ್ಟ್ರೀಯ ಕಂಪನಿಯನ್ನು ಹೆಸರಿಸಿ.

**II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ತಲಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. 10X2=20**

16. ಯಾವುದಾದರೂ ಎರಡು ದ್ರಾವಿಡ ಭಾಷೆಗಳನ್ನು ಹೆಸರಿಸಿ.
17. ಜನಸಂಖ್ಯಾಶಾಸ್ತ್ರದ ಪ್ರಕಾರಗಳನ್ನು ತಿಳಿಸಿ.
18. 'ಜಾತಿ' ಎಂಬ ಪದ ಹೇಗೆ ಉತ್ಪತ್ತಿಯಾಗಿದೆ?
19. ಕರ್ನಾಟಕದ ಪ್ರಬಲ ಜಾತಿಗಳನ್ನು ತಿಳಿಸಿ.
20. ಮಹಿಳಾ ಸಬಲೀಕರಣ ಎಂದರೇನು?
21. ದಲಿತರ ಏಳಿಗೆಗೆ ಡಾ॥ ಬಿ.ಆರ್.ಅಂಬೇಡ್ಕರ್ ಸೂಚಿಸಿರುವ ತ್ರಿವಳಿ ಸೂತ್ರಗಳನ್ನು ತಿಳಿಸಿ.
22. ಅವಿಭಕ್ತ ಕುಟುಂಬದ ಎರಡು ಪ್ರಕಾರಗಳನ್ನು ತಿಳಿಸಿ.
23. ಕರ್ನಾಟಕ ಸರ್ಕಾರ ರಚಿಸಿದ ಎರಡು ಕೃಷಿ ಸಮಿತಿಗಳನ್ನು ತಿಳಿಸಿ.
24. ಮಾರುಕಟ್ಟೆ ಎಂದರೇನು?
25. ಯಾವುದಾದರೂ ಎರಡು ಆನ್‌ಲೈನ್ ಶಾಪಿಂಗ್ ಜಾಲತಾಣಗಳನ್ನು ಹೆಸರಿಸಿ.
26. ಸಮೂಹ ಮಾಧ್ಯಮಗಳ ಪ್ರಕಾರಗಳನ್ನು ತಿಳಿಸಿ.
27. ಸಾಮಾಜಿಕ ಚಳುವಳಿಯನ್ನು ವ್ಯಾಖ್ಯಾನಿಸಿ.
28. ಕರ್ನಾಟಕದ ಯಾವುದಾದರೂ ಎರಡು ರೈತ ಹೋರಾಟಗಳನ್ನು ತಿಳಿಸಿ.
29. ಭಾರತದ ಮಹಿಳೆಯರ ಯಾವುದಾದರೂ ಎರಡು ಸಮಸ್ಯೆಗಳನ್ನು ತಿಳಿಸಿ.
30. ಸಂಸ್ಕೃತಾನುಕರಣ ಎಂದರೇನು?

**III. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ತಲಾ 15 ವಾಕ್ಯಗಳಲ್ಲಿ ಉತ್ತರಿಸಿ. 4X5=20**

31. ಡಾ॥ ಬಿ.ಎಸ್.ಗುಹಾರವರು ವರ್ಗೀಕರಿಸಿದ ಭಾರತದ ಜನಾಂಗೀಯ ಸಮೂಹಗಳನ್ನು ವಿವರಿಸಿ.
32. ಆರ್ಯನೀಕರಣ ಪ್ರಕ್ರಿಯೆಯನ್ನು ಕುರಿತು ಟಿಪ್ಪಣಿ ಬರೆಯಿರಿ.
33. ಬ್ರಿಟೀಷ್ ಆಳ್ವಿಕೆಯಲ್ಲಿ ಜಾತಿ ವ್ಯವಸ್ಥೆಯಲ್ಲಾದ ಪರಿವರ್ತನೆಗಳನ್ನು ವಿಶ್ಲೇಷಿಸಿ.
34. ಸಮಾನತೆಯತ್ತ ವರದಿ–1974 ರ ಉದ್ದೇಶಗಳನ್ನು ವಿವರಿಸಿ.
35. ಅವಿಭಕ್ತ ಕುಟುಂಬದ ಐದು ಲಕ್ಷಣಗಳನ್ನು ವಿವರಿಸಿ.

36. ಭಾರತೀಯ ಗ್ರಾಮಗಳ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿ.
37. ಅಗೋಚರ ಮಾರುಕಟ್ಟೆಯನ್ನು ವಿವರಿಸಿ.
38. ಕ್ಯಾಥೋಲಿನ್‌ಗೌವ್ ಪ್ರಕಾರ ರೈತ ಚಳುವಳಿಗೆ ಕಾರಣವಾದ ಅಂಶಗಳನ್ನು ಚರ್ಚಿಸಿ.

**IV. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ತಲಾ 15 ವಾಕ್ಯಗಳಲ್ಲಿ ಉತ್ತರಿಸಿ. 4X5=20**

39. ಭಾರತದ ವೈವಿಧ್ಯತೆಯ ಸ್ವರೂಪವನ್ನು ವಿವರಿಸಿ.
40. ಬುಡಕಟ್ಟು ಪಂಚಶೀಲ ತತ್ವಗಳನ್ನು ವಿವರಿಸಿ.
41. ಸೂಕ್ಷ್ಮ ಹಣಕಾಸಿನ ಪ್ರಮುಖ ಲಕ್ಷಣಗಳನ್ನು ವಿವರಿಸಿ.
42. ಅವಿಭಕ್ತ ಕುಟುಂಬದ ಅನುಕೂಲಗಳನ್ನು ವಿವರಿಸಿ.
43. ಭಾರತದ ನಗರಗಳ ಸಮಸ್ಯೆಗಳನ್ನು ಚರ್ಚಿಸಿ.
44. ಪುಷ್ಕರ ವಾರ್ಷಿಕ ಜಾತ್ರೆ ಕುರಿತು ಟಿಪ್ಪಣಿ ಬರೆಯಿರಿ.
45. ಆಧುನೀಕರಣಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ.
46. ಜಾಗತೀಕರಣಕ್ಕೆ ಸಹಾಯಕವಾದ ಅಂಶಗಳನ್ನು ವಿವರಿಸಿ.

**V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ತಲಾ 30 ವಾಕ್ಯಗಳಲ್ಲಿ ಉತ್ತರಿಸಿ. 2X10=20**

47. ಭಾರತದ ಜನಸಂಖ್ಯಾಶಾಸ್ತ್ರೀಯ ಚಿತ್ರಣದ ಪ್ರಮುಖ ಲಕ್ಷಣಗಳನ್ನು ವಿವರಿಸಿ.
48. ಜಾತಿ ಪದ್ಧತಿಯನ್ನು ವ್ಯಾಖ್ಯಾನಿಸಿ ಹಾಗೂ ಅದರ ಲಕ್ಷಣಗಳನ್ನು ವಿವರಿಸಿ.
49. ಅಸ್ಪೃಶ್ಯತೆ ನಿವಾರಣೆಯಲ್ಲಿ ಗಾಂಧೀಜಿ ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ರವರ ಪಾತ್ರವನ್ನು ವಿವರಿಸಿ.
50. ಭಾರತೀಯ ಗ್ರಾಮಗಳ ಲಕ್ಷಣಗಳನ್ನು ವಿವರಿಸಿ.
51. ಸಮೂಹ ಮಾಧ್ಯಮ ಎಂದರೇನು? ಹಾಗೂ ಅದರ ಕಾರ್ಯಗಳನ್ನು ವಿವರಿಸಿ.
52. ದಲಿತ ಚಳುವಳಿ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**VI. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ತಲಾ 15 ವಾಕ್ಯಗಳಲ್ಲಿ ಉತ್ತರಿಸಿ. 2X5=10**

53. ರಾಷ್ಟ್ರೀಯ ಭಾವೈಕ್ಯತೆಯ ಸವಾಲುಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿ.
54. ನರಸಿಂಗನವರ್ ಪಿತೃ ಪ್ರಧಾನ ಅವಿಭಕ್ತ ಕುಟುಂಬದ ಬಗ್ಗೆ ಬರೆಯಿರಿ.
55. ಗ್ರಾಮ ಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.
56. ಭಾರತೀಯ ಗ್ರಾಮಗಳ ಪರಿವರ್ತನೆಯನ್ನು ವಿವರಿಸಿ.
57. ಮಲಪ್ರಭ ಹೋರಾಟಕ್ಕೆ ಸಹಾಯಕವಾದ ಅಂಶಗಳನ್ನು ವಿವರಿಸಿ.
58. "ಬಾರ್ಬಿ ಬೊಂಬೆ ಒಂದು ಜಾಗತಿಕ ಪ್ರಜೆ"– ನಿಮ್ಮ ಉತ್ತರವನ್ನು ಸ್ಪಷ್ಟಪಡಿಸಿ.

*** **** ***

DPUEMQP